## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 420/2017 ಸಿಡಬ್ಲೂ: 2 ಪಿಡಬ್ಲೂ: 4

ಪ್ರಮಾಣವಚನ ಬೋಧಿಸಲಾಯಿತು ದಿಃ 28-11-2025

ಹೆಸರು : ಸಾಬಣ್ಣ

ತಂದೆ ಹೆಸರು : ಮಲ್ಲೆಶಪ್ಪ

ವಯಸ್ಸು : 50 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಬೆನಕನಳ್ಳಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 3 ಮತ್ತು 7 ನನಗೆ ಗೊತ್ತು. ಈಗ ಅವರು ತೀರಿಕೊಂಡಿರುತ್ತಾರೆ. ಚಾ ಸಾ 1 ಗೊತ್ತು. ಆರೋಪಿತರು ಗೊತ್ತು.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಪೋಲೀಸರು ನಮ್ಮ ಸಮಕ್ಷಮ ಯಾವುದೇ ರೀತಿಯ ಪಂಚನಾಮೆಗಳು ಮಾಡಿರುವುದಿಲ್ಲ. ನಾನು ಯಾವುದೇ ಪಂಚನಾಮೆಯಲ್ಲಿ ಭಾಗಿಯಾಗಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಪಂಚನಾಮೆಗೆ ಸಹಿ ಹಾಕಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಗುನ್ನೆ ಸ್ಥಳದ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆದರೇ ನಿಪಿ-2 ರಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ವಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ:

ದಿಃ03-03-2017 ರಂದು ಮಧ್ಯಾಹ್ನ 03.30 ಗಂಟೆಯಿಂದ 04.30 ಗಂಟೆಯವರೆಗೆ ನ್ನ ಹಾಗೂ ಚಾಸಾ 3 ರವರು ಸಮಕ್ಷಮ ಚಾ ಸಾ 10 ರಮರ ಪಂಚನಾಮೆಯನ್ನು ಮಾಡಿ ಒಂದು ಬಡಿಗಯನ್ನು ವಶ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಿಲ್ಲ. ಸಾಕ್ಷಿಯು ಬಡಿಗೆಯನ್ನು ನೋಡಿ ಗುರುತಿಸಲು ನಿರಾಕರಿಸಿರುತ್ತಾರೆ ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ.

ಪಂಚನಾಮೆಯಲ್ಲಿ ಭಾಗಿಯಾಗಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನ ಎಂದರೆ ಸರಿಯಿಲ್ಲ.

**ಪಾಟೀಸವಾಲು:** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 420/2017 ಸಿಡಬ್ಲ್ಯೂ: 8 ಪಿಡಬ್ಲ್ಯೂ: 5

ಪ್ರಮಾಣವಚನ ಬೋಧಿಸಲಾಯಿತು ದಿಃ 28-11-2025

ಹೆಸರು : ಈಶಪ್ಪ

ತಂದೆ ಹೆಸರು : ಲಕ್ಷ್ಮಣ

ವಯಸ್ಸು : 35 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಬೆನಕನಳ್ಳಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 1 ನನಗೆ ಗೊತ್ತು. ಚಾ ಸಾ 3 ಮತ್ತು 7 ರವರು ತೀರಿಕೊಂಡಿರುತ್ತಾರೆ. ಚಾ ಸಾ 4 ರಿಂದ 6 ಗೊತ್ತು. ಆರೋಪಿತರು ಗೊತ್ತು.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಚಾ ಸಾ 1 ಮತ್ತು ಆರೋಪಿತರ ನಡುವೆ ಆಗಿದೆ ಎನ್ನಲಾದ ತಂಟೆಯ ಬಗ್ಗೆ ನನಗೆ ಗೊತಿಲ್ಲ. ನಾನು ಯಾವುದೇ ರೀತಿಯ ಜಗಳ ನೋಡಿಲ್ಲ ಹಾಗೂ ಬಿಡಿಸಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>**ಪಾಟೀಸವಾಲುಃ**</u> ಮಾನ್ಯ ಸ.ಸ.ಅ ರವರಿಂದ:

ದಿಃ03-03-2017 ರಂದು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ನಾನು ಮತ್ತು ಚಾ ಸಾ 7 ರವರು ಚಾ ಸಾ 5 ರವರ ಮನೆಯ ಮುಂದೆ ನಿಂತಿದ್ದಾಗ ಆರೋಪಿತರು ಚಾ ಸಾ 5 ರವರಿಗೆ ಮನೆಯನ್ನು ಏಕೆ ಕೆಡವುತ್ತಿದ್ದೀರಿ ನಿಮಗೆ ಗಂಡು ಮಕ್ಕಳು ಇಲ್ಲ ಈ ಮನೆಯಲ್ಲಿ ಅರ್ಧ ಪಾಲು ಬರುತ್ತದೆ ಅಂತ ಹೇಳಿ ಚಾ ಸಾ 1 ರವರಿಗೆ ಶಾಂತಿ ರಂಡಿ ನಿನಗೆ ಬಹಳ ಸೊಕ್ಕು ಬಂದಿದೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಿಲ್ಲ. ಆಗ ಅಲ್ಲೆ ಇದ್ದ ಕಟ್ಟಿಗೆಯಿಂದ ಚಾ ಸಾ 1 ರವರ ಎಡಗಾಲಿನ ಹಾಗೂ ಬಲಗಾಲಿನ ಮೊಳಕಾಲಿಗೆ , ಟೊಂಕಕ್ಕೆ , ಎಡಗೈಯ ಮುಂಗೈಗೆ ಹೊಡೆದು ಗುಪ್ತಗಾಯ ಪಡಿಸಿದರು ಎಂದರೆ ಸರಿಯಿಲ್ಲ. ಆಗ ಚಾ ಸಾ 4 ಮತುತ 5 ರವರು ಬಿಡಿಸಲು ಬಂದಾಗ 3 ನೇ ಆರೋಪಿತನು

ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿಯಿಲ್ಲ. ಆಗ 2 ನೇ ಆರೋಪಿತನು ಈ ಮಕ್ಕಳಿಗೆ ಬಿಡಬೇಡಿರಿ ಅಂತಾ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಿಲ್ಲ. ಆಗ 1 ನೇ ಆರೋಪಿತನು ಚಾ ಸಾ 1 ರವರ ಸೀರೆಯ ಸೆರಗನ್ನು ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿದರು ಎಂದರೆ ಸರಿಯಿಲ್ಲ. ಆಗ ನಾನು ಮತ್ತು ಚಾ ಸಾ 7 ರವರು ಜಗಳ ಬಿಡಿಸಿದ್ದೆವು ಎಂದರೆ ಸರಿಯಿಲ್ಲ. ಸಾಕ್ಷಿಗೆ ಹೇಳಿಕೆಯ ಭಾಗವನ್ನು ಓದಿ ಹೇಳಲಾಯಿತು ಸಾಕ್ಷಿಯು ಅದನ್ನು ನಿರಾಕರಿಸಿರುವುದರಿಂದ ಸದರಿ ಹೇಳಿಕೆಯ ಭಾಗವನ್ನು ನಿ ಪಿ 3 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**